# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
| --- | --- |
| ಶ್ರೀ ರಘುರಾಮ ತಾಯಿ ಪೆನ್ನಕ್ಕ<br>ಬೇವಿನಹಳ್ಳಿ ಗ್ರಾಮ ಬಳ್ಳಾರಿ ತಾ॥ | ಶ್ರೀ ಮಂಜುನಾಥ ತಂದೆ ಎ.ಮಲ್ಲಿಕಾರ್ಜುನ<br>ಶ್ರೀಎ.ಅಂಬರೇಶ್ ತಂದೆ ಎ.ಮಲ್ಲಿಕಾರ್ಜುನ<br>ಬೇವಿನಹಳ್ಳಿ ಗ್ರಾಮ ಬಳ್ಳಾರಿ ತಾ॥ |

**ವಿಷಯ:**ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಬೆವಿನಹಳ್ಳಿ ಗ್ರಾಮದ ಸರ್ವೆ ನಂ:80ಹೆಚ್/1 ವಿಸ್ತೀರ್ಣ:1.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

**ಉಲ್ಲೇಖ:**ಕಂಧಾಯ ನಿರೀಕ್ಷಕರು, ಬಳ್ಳಾರಿ ಇವರ M.R.NO:16/2012-13 ದಿನಾಂಕ:05-07-2014ರ ಆದೇಶ ಮೇರೆಗೆ.

********

**ಪ್ರಸ್ತಾವನೆ,**

ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಬೇವಿನಹಳ್ಳಿ ಗ್ರಾಮದ ಸರ್ವೆ ನಂ:80ಹೆಚ್/1 ವಿಸ್ತೀರ್ಣ:1.00 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ಎ.ಮಲ್ಲಿಕಾರ್ಜುನ ತಂದೆ ಅಂಗಡಿ ಹನುಮಂತಪ್ಪ ಬೇವಿನಹಳ್ಳಿ ಇವರು ದಿನಾಂಕ:05-12-2012 ರಂದು ಕ್ರಯ ಪತ್ರದ ಸಂಖ್ಯೆ: BLY-1-09252/2012-13 ರಂತೆ ಶ್ರೀ ರಘುರಾಮ ತಾಯಿ ಪೆನ್ನಕ್ಕ ಇವರಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ ಖರೀದಿದಾರರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಅವರ ಮನವಿಯಂತೆ ನಮೂನೆ-21 ಗ್ರಾಮದಲ್ಲಿ ಜಾರಿ ಮಾಡಲಾಗಿರುತ್ತದೆ. ನಿಗದಿತ ಅವದಿಯಲ್ಲಿ ಶ್ರೀ ಎ.ಮಂಜುನಾಥ, ಎ.ಅಂಬರೇಶ್ ತಂದೆ ಎ.ಮಲ್ಲಿಕಾರ್ಜುನ ಬೇವಿನಹಳ್ಳಿ ಇವರು ಸದರಿ ಜಮೀನಿನ ಬಗ್ಗೆ ಮುಟೇಶನ್ ಮಾಡದಂತೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಿಂದ ಕಂದಾಯ ಪರಿವೀಕ್ಷಕರು, ಬಳ್ಳಾರಿ ಇವರು ಸದ್ರಿ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ, ಈ ಕಡತವನ್ನು ವಿಚಾರಣೆ ನಡೆಸಿ ಇತ್ಯರ್ಥ ಪಡಿಸಲು ಕಡತವನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸು ಜಾರಿ ಮಾಡಿ ದಿನಾಂಕ:12-01-2015, 24-01-2015, 31-01-2015, 04-02-2015, ಮತ್ತು 16-02-2015 ರಂದು ವಿಚಾರಣೆ ಕೈಗೆತ್ತಿಕೊಳ್ಳಲಾಗಿತ್ತು. ವಿಚಾರಣೆಗೆ ಸದ್ರಿ ಖರೀದಿದಾರರಾದ ಶ್ರೀ ರಘುರಾಮ ತಾಯಿ ಪೆನ್ನಕ್ಕ ತಕರಾರುದಾರರಾದ ಶ್ರೀ ಎ.ಮಂಜುನಾಥ, ಎ.ಅಂಬರೇಶ್ ತಂದೆ ಎ.ಮಲ್ಲಿಕಾರ್ಜುನ ಅವರಗಳು ಹಿರಿಯರ ಸಮುಖದಲ್ಲಿ ಬಗೆ ಹರಿಸಿಕೊಂಡಿರುವುದಾಗಿ ಲಿಖಿತ ಪೂರ್ವಕ ಹೇಳಿಕೆಯನ್ನು ನೀಡಿರುತ್ತಾರೆ ಹಾಗೂ ಸದ್ರಿ ಮೋಜಣಿಯಂತೆ ವಾದಿಗಳು ಮತ್ತು ತಕರಾರುದಾರರು ಸಹಮತ ವ್ಯಕ್ತಪಡಿಸಿರುತ್ತಾರೆ. ಅದ್ದರಿಂದ ಈ ಕೆಳಗಿನಂತೆ ಆದೇಶ

# –::ಆದೇಶ::–

ದಿನಾಂಕ: 04 /4/2015

ಸಂ/ಕಂ/ವಿವಾದ/ 79 /2015–16

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಬೇವಿನಹಳ್ಳಿ ಗ್ರಾಮದ ಸರ್ವೆ ನಂ:80ಹೆಚ್/1 ವಿಸ್ತೀರ್ಣ:1.00 ಎಕರೆ ಜಮೀನಿನ ಕ್ರಯ ಪತ್ರದ ಸಂಖ್ಯೆ: BLY-1-09252/2012-13 ರಂತೆ ಶ್ರೀ ರಘುರಾಮ ತಾಯಿ ಪೆನ್ನಕ್ಕ ಇವರಿಗೆ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಸಿದೆ.

ಈ ಆದೇಶವು ಇಂದು ದಿನಾಂಕ: 4.4.2016 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು

ತಹಶೀಲ್ದಾರರು
ಬಳ್ಳಾರಿ.

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1. ವಾದಿಗಳು–ನ್ಯಾಯವಾದಿಗಳ ಮುಖಾಂತರ .
2. ಪ್ರತಿವಾದಿಗಳು–ನ್ಯಾಯವಾದಿಗಳ ಮುಖಾಂತರ .
3. ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3. ಆದೇಶದ ಕಡತಕ್ಕೆ.